ಅ) ಇವರುಗಳ ಪೈಕಿ ಒಟ್ಟು ಎಷ್ಟು ರೈತರು ಬಳ್ಳಾರಿ ಜಿಲ್ಲೆಗೆ ಸೇರಿದವರು?

ಇ) ಈ ಅಧ್ಯಯನ ಪ್ರವಾಸದಲ್ಲಿ ರೈತರು ಭೇಟಿ ನೀಡಿದ ಸಂಸ್ಥೆಗಳ ವಿವರ ನೀಡುವುದು?

ಈ) ಈ ಅಧ್ಯಯನ ಪ್ರವಾಸದ ಬಗ್ಗೆ ಸರ್ಕಾರ ವರದಿ ತಯಾರಿಸಿದೆಯೇ?

ಉ) ಇಲ್ಲದಿದ್ದಲ್ಲಿ ಇದರ ಬಗ್ಗೆ ವರದಿ ತಯಾರಿಸಿ ಸದನದ ಮುಂದೆ ಮಂಡಿಸಲಾಗುವುದೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) 873.

ಆ) 26

ಇ) ರೈತರು ಭೇಟಿ ನೀಡಿದ ಸ್ಥಳಗಳು

1) ಹೈದರಾಬಾದು : ಇಕ್ರಿಸಾಟ್ ಸಂಸ್ಥೆ ರಾಜೇಂದ್ರನಗರ ಕೃಷಿ ವಿಶ್ವವಿದ್ಯಾಲಯ ಕೇಂದ್ರೀಯ ಒಣಭೂಮಿ ಅಭಿವೃದ್ಧಿ ಸಂಶೋಧನಾ ಕೇಂದ್ರ.

2) ಪೂನಾ : ಗಾಣಿ ಕಚಂದ್ ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಕಾಲೇಜು, ಪೂನಾ.

3) ನಾಸಿಕ್ : ಕ್ಷೇತ್ರ ಭೇಟಿಗಳು ಹಾಗೂ ಈರುಳ್ಳಿ ಮತ್ತು ದ್ರಾಕ್ಷಿ ತಾಕುಗಳಿಗೆ ಭೇಟಿ.

4) ಗುಜರಾತ್ : ಆನಂದ್ ಅಮುಲ್ ಡೈರಿ.

5) ಭೂಪಾಲ್ : ಕೇಂದ್ರೀಯ ಯಂತ್ರೋಪಕರಣ ಸಂಶೋಧನಾ ಸಂಸ್ಥೆ, ಸೋಯಾ ಬಿನ್ ಅವರೆ ಸಂಶೋಧನಾ ಕೇಂದ್ರ.

6) ದೆಹಲಿ : ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಪ್ರಗತಿ ಮೈದಾನ

7) ಉತ್ತರ ಪ್ರದೇಶ : ಬನಾರಸ್ ಹಿಂದೂ ಯೂನಿವರ್ಸಿಟಿ, ವಾರನಾಸಿ, ವೈಜಾಬಾದ್ ಕೃಷಿ ವಿಶ್ವ ವಿದ್ಯಾನಿಲಯ.

8) ಒರಿಸ್ಸಾ : ಅಂತರ ರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆ.

9) ತಮಿಳುನಾಡು : ತಮಿಳುನಾಡು, ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಕಾಲೇಜು, ಕೊಯಮತ್ತೂರು ಕಬ್ಬು ಅಭಿವೃದ್ಧಿ ಸಂಶೋಧನಾ ಕೇಂದ್ರ.

ಈ) ಮತ್ತು ಉ) ಕೃಷಿ ನಿರ್ದೇಶಕರು ರಾಜ್ಯ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದ್ದಾರೆ.

ಸಾವಯವ ಕೃಷಿಯಲ್ಲಿ ಬೆಳವಣಿಗೆ

721 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಷ್ಠಾನಗೊಳಿಸಿರುವ ಆಧುನಿಕ ಕೃಷಿ ವಿಧಾನಗಳು ಯಾವುವು?

ಅ) ಇವುಗಳ ಪೈಕಿ ಸಾವಯವ ಕೃಷಿ ಜನಪ್ರಿಯಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸಾವಯವ ಗೊಬ್ಬರ ಬಳಕೆ ಸ್ವದೇಶಿ ಬೀಜ ತಳಿಗಳು ಇತ್ಯಾದಿಗಳ ಹೆಚ್ಚಿನ ಬಳಕೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಆಧುನಿಕ ಕೃಷಿ ವಿಧಾನಗಳು ಹೀಗಿವೆ :

1. ಗುಣ ಮಟ್ಟದ ಬಿತ್ತನೆ ಬೀಜ ಪೂರೈಕೆ.
2. ಸಮತೋಲನ ರಸಗೊಬ್ಬರ ಬಳಕೆ.
3. ನೈಸರ್ಗಿಕ ಬೇಸಾಯ ಪದ್ಧತಿಗಳು
4. ಸಮಗ್ರ ಪೀಡೆ ನಿರ್ವಹಣೆ
5. ಅವಶ್ಯಕತೆ ತಕ್ಕಂತೆ ಸಸ್ಯ ಸಂರಕ್ಷಣೆ ಕೈಗೊಳ್ಳುವುದು.
6. ಖರ್ಚಿಲ್ಲದೆ ಬೇಸಾಯ ಕ್ರಮಗಳನ್ನು ಕೈಗೊಳ್ಳುವುದು ಇತ್ಯಾದಿ. ಆಧುನಿಕ ಕೃಷಿ ವಿಧಾನಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಬಂದಿದೆ.

ಇ) ಸಾವಯವ ಕೃಷಿ ಯೋಜನೆ, ಜೈವಿಕ ಗೊಬ್ಬರ, ಜನಪ್ರಿಯಗೊಳಿಸುವ ಯೋಜನೆ, ಸುಧಾರಿತ ಕಾಂಪೋಸ್ಟ್ ತಯಾರಿಕೆಗಾಗಿ ಉತ್ತೇಜನ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಸಹಾಯ ಧನ ನೀಡುವುದು ಇವೇ ಮುಂತಾದ ಪ್ರಮುಖ ಕಾರ್ಯಕ್ರಮಗಳನ್ನು ಸರ್ಕಾರವು ಕೈಗೊಂಡಿದೆ. ಇದಲ್ಲದೆ ರಿಯಾಯಿತಿಯಲ್ಲಿ ಹಸಿರೆಲೆ ಗೊಬ್ಬರದ ಬೀಜ ಪೂರೈಕೆ, ಉತ್ತಮ ಗುಣಮಟ್ಟದ ಬೀಜ ಪೂರೈಕೆ ಇವೇ ಮುಂತಾದ ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಳ್ಳಲಾಗಿದೆ.

ಬಳ್ಳಾರಿಯಲ್ಲಿರತಕ್ಕ ಸಾಯಿಲ್ ಕನ್ಸರ್‌ವೇಷನ್ ರಿಸರ್ಚ್ ಕೇಂದ್ರವನ್ನು ಕೃಷಿ ಕಾಲೇಜನ್ನಾಗಿ ಮೇಲ್ದರ್ಜೆಗೆ ಏರಿಸುವುದು

722 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿಯಲ್ಲಿರತಕ್ಕ ಕೇಂದ್ರ ಸರ್ಕಾರದ ಸಾಯಿಲ್ ಕನ್ಸರ್‌ವೇಷನ್ ರಿಸರ್ಚ್ ಕೇಂದ್ರವನ್ನು ಕೃಷಿ ಕಾಲೇಜನ್ನಾಗಿ ಮೇಲ್ದರ್ಜೆಗೆ ಏರಿಸಬೇಕೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆಯೇ?

ಆ) ಮನವಿ ಸಲ್ಲಿಸಿದ್ದರೆ, ಕೇಂದ್ರ ಸರ್ಕಾರದಿಂದ ಬಂದಿರುವ ಪ್ರತಿಕ್ರಿಯೆ ಏನು?

ಇ) ಇಲ್ಲದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ?